ದಿನಾಂಕ 3 ನೇ ನವೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದಃ-

ಕೋಣೆಯಂಡ ಕುಟುಂಬಸ್ಥರ ಪಾಲು ಪಾರಿಕತ್ ಅವರ ಅಜ್ಜರ ಕಾಲದಲ್ಲಿ ಆಗಿದೆ. 1 ನೇ ಪ್ರತಿವಾದಿಯ ತಂದೆಯ ಹೆಸರು ಸುಬ್ಬಯ್ಯ. 2 ನೇ ಪ್ರತಿವಾದಿಯ ತಂದೆಯ ದೇವಯ್ಯ. ಪ್ರತಿವಾದಿಯ ತಾತನ ಹೆಸರು ಅಣ್ಣಯ್ಯ. ಅಣ್ಣಯ್ಯನವರಿಗೆ ಇಬ್ಬರು ಗಂಡು ಮಕ್ಕಳು ಸುಬ್ಬಯ್ಯ ದೇವಯ್ಯ ಎಂದರೆ ಸರಿ. ಅಣ್ಣಯ್ಯನವರ ತಂದೆಯ ಹೆಸರು ತಮ್ಮಯ್ಯ. ಅಣ್ಣಯ್ಯನವರಿಗೆ ಪಾಲು ಪಾರಿಕತ್ ನಲ್ಲಿ ಬಂದ ಪಾಲು ಪ್ರತಿವಾದಿಗಳ ತಂದೆಯರಿಗೆ ಮಾತ್ರ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ 53/2, 53/8, 42/2 ಅಣ್ಣಯ್ಯನವರಿಗೆ ಸೇರಿದ ಆಸ್ತಿಗಳು ಎಂದರೆ ಸರಿ.

ಅಣ್ಣಯ್ಯನವರು ಬಾಳಾಜಿ ಗ್ರಾಮದಲ್ಲಿ ಆಸ್ತಿ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಲ್ಲ ಕಟ್ಟ ಕಾಲುವೆಗೆ ದಂಡೆ ಇದೆ ಎಂದರೆ ಸರಿ. ಸದರಿ ದಂಡೆ ಸುಮಾರು 2 ಕಿ. ಮೀ ಉದ್ದ ಇರಬಹುದು ಎನ್ನುತ್ತಾರೆ. ಸದರಿ ದಂಡೆ ಮೂಲಕ ಓಡಾಡಿ ಸರ್ಕಾರದವರು ಸ್ವಚ್ಛ ಗೊಳಿಸುತ್ತಾರೆ ಎಂದರೆ ಸರಿ. ಸದರಿ ನಾಲೆಯಿಂದ ಹಲವು ಗದ್ದೆಗಳಿಗೆ ನೀರು ಹಾಯಿಸಲಾಗುತ್ತದೆ ಎಂದರೆ ಸರಿ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ) ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.